**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 1612/2019**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು. ಪಿಡಬ್ಲ್ಯೂ 1**

**ದಿನಾಂಕಃ 22.04.2025**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಇ ಎಂ ವಕೀಲರಿಂದಃ**

ಆರೋಪಿಗೆ ನೋಟಿಸ್ ನೀಡಲು ನನ್ನ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಆರೋಪಿ 2 ತಿಂಗಳ ಒಳಗಾಗಿ ಹಣ ಮರುಪಾವತಿ ಮಾಡುತ್ತೇನೆ ಎಂದು ಹೇಳಿದ್ದರು. ಆರೋಪಿಗೆ ನಾನು 2 ತಿಂಗಳ ಒಳಗಾಗಿ ಹಣವನ್ನು ಕೊಡು ಎಂದು ನೋಟಿಸ್ ನೀಡಿಲ್ಲ. ನನ್ನ ಪಿರ್ಯಾದಿ ಹಾಗೂ ನೋಟಿಸನಲ್ಲಿ ಆರೋಪಿಗೆ ನಾನು ನಾನು ಸಾಕ್ಷಿಗಳ ಸಮಕ್ಷಮ ಹಣ ಕೊಟ್ಟಿದ್ದೇನೆ ಎಂದು ಬರೆಸಿಲ್ಲ. ನಾನು ಪಿರ್ಯಾದಿ ಅರ್ಜಿಗೆ ಸಹಿ ಮಾಡುವ ಪೂರ್ವದಲ್ಲಿ ಅದರ ಅಂಶಗಳನ್ನು ವಕೀಲರು ಓದಿ ಹೇಳಿದ್ದಾರೆ ಎಂದರೆ ಸರಿ. ಸದರಿ ಅರ್ಜಿಯಲ್ಲಿನ ಯಾವುದೇ ಅಂಶಗಳನ್ನು ನಾನು ತೆಗೆಯಲು ಹೇಳಿಲ್ಲ. ನನ್ನ ಪ್ರತಿಜ್ಞಾ ಪೂರ್ವಕ ಹೇಳಿಕೆಯಲ್ಲಿ ಹೇಳಿರುವ ಅಂಶಗಳು ನನಗೆ ತಿಳಿದಿದೆ. ನಾನು ಮೊದಲ ಬಾರಿಗೆ ಚೆಕನ್ನು ನಗದೀಕರಣಕ್ಕೆ ಸಲ್ಲಿಸಿ ಅದು ನಗದೀಕರಣವಾಗದೇ ಇದ್ದಾಗ ಆರೋಪಿಗೆ ನೋಟಿಸ್ ನೀಡಿಲ್ಲ. ನಿಪಿ.1 ನಗದೀಕರಣವಾಗದೇ ಹಿಂಬರಹ ಬಂದ ನಂತರ ಆರೋಪಿಯಿಂದ ಯಾವುದೇ ಮುಚ್ಚಳಿಕೆ ಪತ್ರ ಬರೆಸಿಕೊಂಡಿಲ್ಲ. ನಿಪಿ.1 ನ್ನು ನನಗೆ ನೀಡಿದಾಗ ಅದು ಖಾಲಿ ಇತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರೇ ಬರೆದುಕೊಂಡು ಬಂದಿದ್ದರು ಎಂದು ನುಡಿಯುತ್ತಾರೆ. ಸದರಿ ಸಂದರ್ಭದಲ್ಲಿ ನಾನು ಆರೋಪಿಗೆ ನಿಪಿ.1 ಚೆಕ್ ನ್ನು ನನ್ನ ಸಮಕ್ಷಮ ಭರ್ತಿ ಮಾಡಲು ಕೇಳಿಲ್ಲ. ಆರೋಪಿಗೆ ನಿಪಿ.1 (ಎ) ಸಹಿ ಮಾಡುವ ಕಾಲಕ್ಕೆ ನಿಪಿ.1 ರಲ್ಲಿ ನಮೂದಿಸಿದ ದಿನಾಂಕ, ಮೊತ್ತ ಮತ್ತು ಸಹಿಯ ಬಗ್ಗೆ ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ. ನನಗೆ ಇಂಗ್ಲೀಷ್ ಭಾಷೆ ಬರೆಯಲು ಬರುತ್ತದೆ. ನಿಪಿ.1 ನ್ನು ನಾನು ಬರೆದಿಲ್ಲ. ನಿಪಿ.1 (ಎ) ಮತ್ತು ನಿಪಿ.1 ರಲ್ಲಿ ಬರೆದಿರುವ ಬರವಣಿಗೆ ಬೇರೆ ಬೇರೆ ಇದೆ ಎಂದರೆ ಸಾಕ್ಷಿಯು ಆರೋಪಿಯೇ ಬರೆಸಿಕೊಂಡು ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ. 1 ರಲ್ಲಿ ನಮೂದಿಸಿದ ಮೊತ್ತಕ್ಕೆ ನಿಪಿ1 ನ್ನು ಹಾಜರುಪಡಿಸಲು ಆರೋಪಿ ಹೇಳಿರಲಿಲ್ಲ ಎಂದರೆ ಸರಿಯಲ್ಲ. ನಿಪಿ.4 ರಲ್ಲಿ ಹೇಳಿರುವ ಅಂಶಗಳಿಗೂ ಹಾಗೂ ನಿಪಿ.1 ಕ್ಕೂ ತಾಳೆ ಇಲ್ಲ ಎಂದರೆ ಸರಿಯಲ್ಲ. ಆರೋಪಿಯ ಸ್ನೇಹವನ್ನು ಹಾಗೂ ನಿಪಿ.1 ನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ದೂರು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ಸಾಲವನ್ನು ಕೇಳಲು ಬಂದ ಸಂದರ್ಭದಲ್ಲಿ ಅವರ ಬ್ಯಾಂಕ್ ಪಾಸ್ ಬುಕನ್ನು ನಾನು ಪರಿಶೀಲನೆ ಮಾಡಿಲ್ಲ. ಆರೋಪಿ ಕುಲುಮೆ ಕೆಲಸ ಮಾಡುತ್ತಾರೆ. ಸಾಕ್ಷಿಯು ಮುಂದುವರೆದು ಪ್ರಸ್ತುತ ಬೇರೆ ಯಾವುದೇ ಕೆಲಸ ಮಾಡುತ್ತಾರೆ. ಕುಲುಮೆ ಕೆಲಸಕ್ಕೆ ಸಾಕಷ್ಟು ಆದಾಯ ಇಲ್ಲ ಎಂದರೆ ಸರಿ. ಆರೋಪಿಗೆ 3 ಜನ ಮಕ್ಕಳು. ಆರೋಪಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಸಾಕ್ಷಿಯು

ಮುಂದುವರೆದು  ಸ್ವಂತ ಮನೆ ಇದೆ ಎಂದು ನುಡಿಯುತ್ತಾರೆ. ಈ ಎಲ್ಲಾ ವಿಚಾರವನ್ನು ನನ್ನ ಪಿರ್ಯಾದಿಯಲ್ಲಿ ಬರೆಸಿಲ್ಲ ಎಂದರೆ ಸರಿ. ಸಾದಿಕ್ ಎನ್ನುವವರ ಪರಿಚಯ ನನಗೆ ಇಲ್ಲ. ಸಾಕ್ಷಿಯು ಮುಂದುವರೆದು ಸಾದಿಕ್ ಎನ್ನುವವರು 3-4 ಜನ ಇದ್ದಾರೆ ಎಂದು ನುಡಿಯುತ್ತಾರೆ. ಪೇಂಟ್ ಹೊಡೆಯುವ ಸಾದಿಕ್ ನನಗೆ ಗೊತ್ತಿಲ್ಲ. ಸದರಿ ಸಾದಿಕ್ ನಮ್ಮ ಓಣಿಯಲ್ಲಿ ಇದ್ದಾರೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಹಬ್ಬ ಹರಿದಿನಗಳಲ್ಲಿ ನಾನು, ಆರೋಪಿ, ಸಾದಿಕ್  ಮತ್ತು ಇಸ್ಮಾಯಿಲ್ ಸೇರುತ್ತೇವೆ ಎಂದರೆ ಸಾಕ್ಷಿಯು ಮೊದಲು ಸೇರುತ್ತಿದ್ದೆವು ಈಗ ಇಲ್ಲ ಎಂದು ನುಡಿಯುತ್ತಾರೆ. ಸದರಿಯವರೆಲ್ಲರೂ ನನ್ನ ಬಳಿ ಆಗಾಗ ಹಣವನ್ನು ಪಡೆಯುತ್ತಿದ್ದರು ಎಂದರೆ ಸರಿಯಲ್ಲ. ಸಾದಿಕ್ ಎನ್ನುವವರು ನನ್ನ ಬಳಿ 2 ಸಾವಿರ ರೂ ಸಾಲ ಪಡೆದು ಆರೋಪಿಯ ಚೆಕ್ ನ್ನು ನನಗೆ ಕೊಟ್ಟಿದ್ದಾರೆ  ಎಂದರೆ ಸರಿಯಲ್ಲ. ಆರೋಪಿಯ ಹೆಸರು ವಿಳಾಸ ನನಗೆ ಗೊತ್ತಿದ್ದರಿಂದ ಸದರಿ ಚೆಕ್ ನ್ನು ದುರುಪಯೋಗ ಪಡಿಸಿಕೊಂಡು ಈ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.  ಆರೋಪಿ ಹಣ ಪಡೆಯುವ ಸಂದರ್ಭದಲ್ಲಿ ಅವರ ಸ್ನೇಹಿತ ಇಸ್ಮಾಯಿಲ್ ಎನ್ನುವವರನ್ನು ಕರೆದುಕೊಂಡು ಬಂದಿದ್ದರು. ಸದರಿ ಇಸ್ಮಾಯಿಲ್ ರವರ ಸಮಕ್ಷಮ ನಾನು ಹಣ ನೀಡಿರುತ್ತೇನೆ. ಸದರಿ ಇಸ್ಮಾಯಿಲ್ ನನ್ನು ಸಾಕ್ಷಿದಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಈ ಎಲ್ಲಾ ಸಂಗತಿಗಳನ್ನು ಸೃಷ್ಟಿ ಮಾಡಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.1 ನ್ನು ಎರಡು ಬಾರಿ ಹಾಜರುಪಡಿಸಲು ಸಾದಿಕ್ ಕಾರಣ ಆರೋಪಿ ಅಲ್ಲ ಎಂದರೆ ಸರಿಯಲ್ಲ. ಆರೋಪಿಗೆ ನಾನು ನೋಟಿಸ್ ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ.4 ರಲ್ಲಿರುವ ಅಂಶಗಳು ಆರೋಪಿಗೆ ತಿಳಿದಿಲ್ಲ ಎಂದರೆ ಸರಿಯಲ್ಲ. ನಿಪಿ.4 ರ ಪ್ರತಿಯನ್ನು ನಿಪಿ.5 ಮತ್ತು 6 ಪೋಸ್ಟಲ್ ಕವರ್ ನಲ್ಲಿ ಹಾಕಿರಲಿಲ್ಲ ಎಂದರೆ ಸರಿಯಲ್ಲ. ಆದ ಕಾರಣ ಆರೋಪಿ ಯಾವುದೇ ಮರುಉತ್ತರ ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ.1 ರ ವ್ಯವಹಾರಕ್ಕಾಗಿ ನಾನು ಪೊಲೀಸರಿಗೆ ಯಾವುದೇ ದೂರು ನೀಡಿಲ್ಲ. ನಿಪಿ.1 ರ ಮೊತ್ತಕ್ಕೂ ಹಾಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ನಿಪಿ.1 ನ್ನು ದುರುಪಯೋಗ ಪಡಿಸಿಕೊಂಡು ಆರೋಪಿಯ ವಿರುದ್ದ ಸುಳ್ಳು ದೂರು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ .**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ